ಶಿವಕುಮಾರ್ ಶರ್ಮಾ **ಪ್ರವೀಣ್ ಗೋಡ್ಖಿಂಡಿ** **ಷಡ್ಜ ಗೋಡ್ಖಿಂಡಿ**

ಈ ಯೋಜನೆಗೆ ಇನ್‌ಸಿಂಕ್ ಚಾನೆಲ್ ಸಹಭಾಗಿತ್ವವಿದ್ದು, ದೇಶದ ಬೇರೆ ಬೇರೆ ಭಾಗಗಳಲ್ಲಿ ಛೇರಿಗಳು ನಡೆಯಲಿವೆ. ಸದ್ಯಕ್ಕೆ ಬೆಂಗಳೂರಿನ ುಸ್ತುವಾರಿಯನ್ನು ಪ್ರವೀಣ್ ಗೋಡ್ಖಿಂಡಿ ವಹಿಸಿಕೊಂಡಿದ್ದು, ಆಸಕ್ತರು ವಾರ್ಷಿಕ ಸದಸ್ಯತ್ವ ಪಡೆಯಬಹುದು. ಒಮ್ಮೆ ಜಿಸಿಐಎಂ ಸದಸ್ಯತ್ವ ಪಡೆದ ಬಳಿಕ ವರ್ಷಪೂರ್ತಿ ಬೆಂಗಳೂರಿನಲ್ಲಿ ನಡೆಯುವ ಹತ್ತು ಸಂಗೀತ ಕಛೇರಿಗಳಿಗೆ ಉಚಿತ ಪ್ರವೇಶವಿರುತ್ತ ಇದರಲ್ಲಿ ಆರು ಕಛೇರಿಗಳಲ್ಲಿ ಸಂಗೀತ ಕ್ಷೇತ್ರದ ದಿಗ್ಗ ಭಾಗವಹಿಸಲಿದ್ದು, ಉಳಿದ ನಾಲ್ಕು ಕಛೇರಿಗಳಲ್ಲಿ ಉದಯೋನ್ಮುಖ ಕಲಾವಿದರಿಗೆ ಅವಕಾಶ ಮತ್ತು ಕಾರ್ಯಾಗಾರ, ವಿಚಾರಸಂಕಿರಣ ಏರ್ಪಡಿಸುವ ಉದ್ದೇಶವಿದೆ. ಜನಪದ ಗೀತೆ, ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ತಾನಿ ಸಂಗೀತ, [illegible] ಇನ್‌ಸಿಂಕ್ ಆಯೋಜಿಸುವ ಸಂಗೀತ ಕಾರ್ಯಕ್ರಮವಿದ್ದರೂ ನಾವು ನೀಡಿದ ಸದಸ್ಯತ್ವ ಕಾರ್ಡ್ ತೋರಿಸಿ ಉಚಿತವಾಗಿ ಸಂಗೀತ ಆಸ್ವಾದಿಸಬಹುದು. ಈ ಮೂಲಕ ಶಾಸ್ತ್ರೀಯ ಸಂಗೀತವನ್ನು ಉಳಿಸುವ ಅಭಿಯಾನವನ್ನು ಮಾಡುತ್ತಿದ್ದೇವೆ. ನನಗೇನೋ ಆರಂಭದಿಂದಲೂ ಗುರುಗಳಿಂದ, ಮಾಧ್ಯಮಗಳಿಂದ ಒಳ್ಳೆಯ ಪ್ರೋತ್ಸಾಹ ಸಿಕ್ಕಿತು. ಅದೇ ರೀತಿ, ಯುವಜನತೆಯನ್ನು [illegible] ಪ್ರೋತ್ಸಾಹ [illegible] ಹಾಗೇ, ಚಿತ್ರಗೀತೆಗಳ ಕಾರ್ಯಕ್ರಮಕ್ಕೆ [illegible] ಜನ ಪ್ರಾಯೋಜಕರು ಸಿಗುತ್ತಾರೆ. ಆದರೆ, ಶಾಸ್ತ್ರೀಯ ಸಂಗೀತದ ವಿ ಬಂದಾಗ ಅದರಿಂದ ನಮಗೇನೂ ಆದಾಯ ಸಿಗಲಾರದು ಎಂದುಕೊಂಡು ಹಿಂಜರಿಯುತ್ತಾರೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಗೋಡ್ಖಿಂಡಿ. ಕಾರ್ಯಕ್ರಮದ ಕುರಿತಾದ ಹೆಚ್ಚಿನ ಮಾಹಿತಿಗೆ ಪ್ರಶಾಂತ್- 98458 24725, 080-26723855 ಸಂಪರ್ಕಿಸಿ.

ವಿನಿಯೋಗಿಸಲಾಗುತ್ತಿದೆ. [illegible] ನಡುವೆ ಇರುವ ಮಹಾನ್ ಸಂಗೀತಗಾರರು ಇರುವುದಿಲ್ಲ. ಅವರು ಇದ್ದಾಗಲೇ ಅವರ ಸಂಗೀತ ಜ್ಞಾನವನ್ನು ಜಗತ್ತಿಗೆ ಪಸರಿಸಿ, ದಾಖಲೆಯಾಗಿ ಉಳಿಸುವ ಪ್ರಯತ್ನದಲ್ಲಿದ್ದೇವೆ. ಓರ್ವ ಸಂಗೀತಗಾರನಾಗಿ ಶಾಸ್ತ್ರೀಯ ಸಂಗೀತದ ಅಸ್ತಿತ್ವಕ್ಕಾಗಿ ಹೋರಾಡಬೇಕಾದುದು ನನ್ನ ವೈಯಕ್ತಿಕ ಜವಾಬ್ದಾರಿಯೂ ಹೌದು ಎಂಬುದು ಗೋಡ್ಖಿಂಡಿ ಅವರ ಅಭಿಪ್ರಾಯ.

RVCE Celebrated Kannada Rajyotsava 2015

ವಿಧಾನಸೌಧದಲ್ಲೇ ಕನ್ನಡ ಬಳಕೆಯಿಲ್ಲ!

■ ಹಿರಿಯ ಕವಿ ಡಾ. ಸಿದ್ಧಲಿಂಗಯ್ಯ ಅಸಮಾಧಾನ ■ ಕನ್ನಡ ಕಾರಂಜಿ ಹಬ್ಬಕ್ಕೆ ಚಾಲನೆ

ಕನ್ನಡ ಕಾರಂಜಿ ಹಬ್ಬಕ್ಕೆ ಡಾ. ಸಿದ್ದಲಿಂಗಯ್ಯ ಚಾಲನೆ ನೀಡಿದರು. ನಟ ಪ್ರೇಮ್, ಎಚ್.ಎಸ್. ವೆಂಕಟೇಶ ಮೂರ್ತಿ ಇತರರಿದ್ದರು.

ಬೆಂಗಳೂರು: ವಿಧಾನಸೌಧದಲ್ಲೇ ಆಡಳಿತ ಭಾಷೆ ಕನ್ನಡ ಸಂಪೂರ್ಣವಾಗಿ ಜಾರಿಯಾಗಿಲ್ಲ. ಅಧಿಕಾರಿಗಳೆಲ್ಲ ಆಂಗ್ಲಭಾಷೆಯಲ್ಲಿ ವ್ಯವಹರಿಸುತ್ತ ಕನ್ನಡ ಬಳಕೆಯನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಹಿರಿಯ ಕವಿ ಡಾ. ಸಿದ್ದಲಿಂಗಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯ, ವಿಜಯವಾಣಿ ಪ್ರಾಯೋಜಕತ್ವದಲ್ಲಿ ಬುಧವಾರ ಆಯೋಜಿಸಿದ್ದ 'ಕನ್ನಡ ಕಾರಂಜಿ' ಕನ್ನಡ ಹಬ್ಬ ಉದ್ಘಾಟಿಸಿ ಮಾತನಾಡಿ, ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಬೇಕಾದ ವಿಧಾನಸೌಧದಲ್ಲಿ ಕನ್ನಡದ ಬಗ್ಗೆ ಅಸಡ್ಡೆ ತೋರುವ ಅಧಿಕಾರಿಗಳೇ ಹೆಚ್ಚು. ಕೆಳ ಹಂತದ ನ್ಯಾಯಾಲಯಗಳಲ್ಲಿ ಕನ್ನಡದಲ್ಲೇ ತೀರ್ಪು ನೀಡಬೇಕೆಂದು ಆದೇಶವಿದ್ದರೂ ಪಾಲಿಸುತ್ತಿಲ್ಲ. ಒಟ್ಟಾರೆ ಸರ್ಕಾರವೇ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ಇತರೆ ರಾಜ್ಯಗಳಲ್ಲಿ ಮಾತೃಭಾಷೆಯಲ್ಲೇ ಆಡಳಿತ ನಡೆಯುತ್ತದೆ. ಆದರೆ, ನಮ್ಮಲ್ಲಿ ಕನ್ನಡ ಬಳಕೆ ಮಾಡುವುದು ತುಂಬಾ ಕಡಿಮೆ. ಸರ್ಕಾರ ರೈತರು, ಕೂಲಿ ಕಾರ್ಮಿಕರಿಗೆ ಅರ್ಥವಾಗುವಂತಹ ಸರಳ ಮತ್ತು ಸುಲಲಿತ ಕನ್ನಡ ಭಾಷೆಯಲ್ಲೇ ಆಡಳಿತ ನಡೆಸಬೇಕು. ಇಂಗ್ಲಿಷ್ ಮಾತನಾಡುವವರು ಮಾತ್ರ ಬುದ್ಧಿವಂತರು ಎಂಬ ಭ್ರಮೆ ಅಧಿಕಾರಿಗಳಲ್ಲಿದೆ. ಇದು ಮೊದಲು ಹೋಗಬೇಕು ಎಂದರು.

ಕನ್ನಡಕ್ಕೆ 2 ಸಾವಿರ ವರ್ಷಗಳ ಇತಿಹಾಸವಿದೆ. 1ನೇ ಶತಮಾನದಲ್ಲಿ ಗ್ರೀಕ್ ನಾಟಕದಲ್ಲಿ ಕನ್ನಡ ಪದ ಬಳಕೆಯ ಉಲ್ಲೇಖವಿದೆ. 8 ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಶ್ರೀಮಂತ ಭಾಷೆ ನಮ್ಮದು. ತಾಂತ್ರಿಕ ಶಿಕ್ಷಣದಲ್ಲಿ ಉನ್ನತ ಸ್ಥಾನದಲ್ಲಿರುವ ಇಂಥ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಖುಷಿ ತಂದಿದೆ. ಕಾಲೇಜಿನ ವಿಭಾಗಗಳ ಫಲಕಗಳನ್ನು ಕನ್ನಡದಲ್ಲಿರಿಸುವುದು ಸೂಕ್ತ ಎಂದರು.

ಸಾಹಿತಿ ಎಚ್.ಎಸ್. ವೆಂಕಟೇಶ ಮೂರ್ತಿ ಮಾತನಾಡಿ, ಗುರು-ಶಿಷ್ಯ ಪರಂಪರೆ ನಶಿಸಿಹೋಗುತ್ತಿದೆ. ಈ ಹಿಂದೆ ಶಿಷ್ಯರು ಗುರುಗಳಿಗೆ ತುಂಬಾ ಗೌರವ ನೀಡುತ್ತಿದ್ದರು. ಇಂದು ಗುರುಗಳ ಬಗ್ಗೆ ಗೌರವ ಕ್ಷೀಣಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕನ್ನಡ ಭಾಷೆ ಬೆಳವಣಿಗೆಗೆ ಈ ರೀತಿಯ ಕಾರ್ಯಕ್ರಮಗಳು ಪೂರಕವಾಗಿದೆ ಎಂದರು.

ಕಾಲೇಜು ಪ್ರಾಂಶುಪಾಲ ಡಾ. ಕೆ.ಎನ್. ಸುಬ್ರಹ್ಮಣ್ಯ, ನಟ ಪ್ರೇಮ್ ಮತ್ತಿತರರು ಉಪಸ್ಥಿತರಿದ್ದರು.

> ಪ್ರಾಥಮಿಕ ಶಿಕ್ಷಣವನ್ನು ನಾನು ಕನ್ನಡ ಮಾಧ್ಯಮದಲ್ಲಿಯೇ ಪಡೆದಿದ್ದೇನೆ. ರಾಜ್ಯದಲ್ಲಿ ಕನ್ನಡ ಭಾಷೆ ಆಡಳಿತ ಭಾಷೆಯಾಗಿ ರೂಪುಗೊಳ್ಳಬೇಕು. ಆಂಗ್ಲ ಮಾಧ್ಯಮದಲ್ಲಿ ಓದಿದವರು ಮಾತ್ರ ಬುದ್ಧಿವಂತರು ಎಂಬುದು ಭ್ರಮೆ.
>
> । ಡಾ.ಎಂ.ಕೆ. ಪಾಂಡುರಂಗ ಶೆಟ್ಟಿ ರಾಷ್ಟ್ರೀಯ ಶಿಕ್ಷಣ ಸಮಿತಿ ದತ್ತಿ ಅಧ್ಯಕ್ಷ

ಎಲ್ಲೆಲ್ಲೂ ಕನ್ನಡ ವಾತಾವರಣ

ಕನ್ನಡ ಕಾರಂಜಿ ಹಬ್ಬ ಪ್ರಯುಕ್ತ ಇಂಜಿನಿಯರಿಂಗ್ ಕಾಲೇಜಿನಲ್ಲಿನ ವಾತಾವರಣ ಸಂಪೂರ್ಣ ಕನ್ನಡಮಯವಾಗಿತ್ತು. ವಿಕಾಸ ಚಾರಿಟಬಲ್ ಟ್ರಸ್ಟ್‌ನ ಅಂಧರು ಕನ್ನಡ ಗೀತೆಗಳನ್ನು ಹಾಡಿ ಪ್ರೇಕ್ಷಕರ ಗಮನ ಸೆಳೆದರು. ಕಾಲೇಜಿನ ವಿದ್ಯಾರ್ಥಿಗಳು ಭಾವಗೀತೆಗಳನ್ನು ಹಾಡಿ ರಂಜಿಸಿದರು. ಕಾಲೇಜು ಸಿಬ್ಬಂದಿ ಮತ್ತು ಹಳೆಯ ವಿದ್ಯಾರ್ಥಿಗಳಿಗಾಗಿ ಸಂಗೀತ, ನೃತ್ಯ ಸ್ಪರ್ಧೆ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಭಾರತೀಯ ಸಾಂಪ್ರದಾಯಿಕ ಉಡುಗೆ ತೊಟ್ಟು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಕನ್ನಡ ಹಬ್ಬದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು.

ವಿವಿಯಲ್ಲಿ
ನ ಸ್ಪರ್ಧೆ

ಫ್ ಫ್ರೆಂಚ್ ಟೀಚರ್ಸ್ ಹಾಗೂ ಂದು ಸೆಂಟ್ರಲ್ ಕಾಲೇಜಿನ ಸೆನೆಟ್ ನ ಸ್ಪರ್ಧೆ ಏರ್ಪಡಿಸಿದೆ. ಮುಖ ನಗರಗಳಲ್ಲಿ ಗಾಯನ ಸ್ಪರ್ಧೆ ರ್ಧೆಗಳು ಶನಿವಾರ ನಡೆಯಲಿರುವ ಲಿದ್ದಾರೆ. ವಿಜೇತರಿಬ್ಬರು ಪ್ಯಾರಿಸ್ ುತ್ತು ಮೂರನೇ ಬಹುಮಾನವನ್ನು ಮೊಬ್ಬ ಸ್ಪರ್ಧಿಗೂ ಪ್ರಮಾಣಪತ್ರ ತಿ ವೆಂಕಟೇಶ್ ತಿಳಿಸಿದ್ದಾರೆ. ರಿ ಕಚೇರಿ, ಫ್ರೆಂಚ್ ಟಿ.ವಿ ವಾಹಿನಿ, ದ್ದಾರೆ.

ಗಳಲ್ಲಿ 3.75 ಕೋಟಿ ರೂ. ವೆಚ್ಚದ ವಿಶ್ವನಾಥ್ ಚಾಲನೆ ನೀಡಿದರು. ಭಾರತಿ ವೆಂಕಟೇಶ್, ತಾ.ಪಂ. ವಸಂತಲಕ್ಷ್ಮಿ ಮತ್ತಿತರರಿದ್ದರು.

ಕೃಷಿ ಮೇಳಕ್ಕೆ ಚಾಲನೆ

ಕೃಷಿ ವಿಶ್ವವಿದ್ಯಾಲಯ ಆಯೋಜನೆ. ಬೆಳಗ್ಗೆ 11.30ಕ್ಕೆ. ಉದ್ಘಾಟನೆ: ರಾಜ್ಯಪಾಲ ವಿ.ಆರ್. ವಾಲಾ. ಅಧ್ಯಕ್ಷತೆ: ಸಚಿವ ಕೃಷ್ಣ ಬೈರೇಗೌಡ. ಮುಖ್ಯಅತಿಥಿಗಳು: ಶಾಸಕ

■ ಉಪನ್ಯಾಸ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಆಯೋಜನೆ. ಅಧ್ಯಕ್ಷತೆ: ಕರ್ನಾಟಕ ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಕೆ. ನಾರಾಯಣ ರೆಡ್ಡಿ. ಉಪನ್ಯಾಸ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಗೊ.ರು. ಚನ್ನಬಸಪ್ಪ. ವಿಷಯ: ಜೀವನ ಸಂಸ್ಕೃತಿ. ಮುಖ್ಯಅತಿಥಿಗಳು: ಪರಿಷತ್ ಕಾರ್ಯಾಧ್ಯಕ್ಷ

ಭರತನಾಟ್ಯ ರಂಗಪ್ರವೇಶ

ಅಜಂತ ಇಂಟರ್‌ನ್ಯಾಷನಲ್ ಕಲ್ಚರಲ್ ಸೊಸೈಟಿ ಆಯೋಜನೆ. ಗುರು ಎಲ್. ಮಂಜುಳಾ ಅವರ ಶಿಷ್ಯೆ

ಅನನ್ಯಾ ಎಚ್. ಗೌಡ ರಂಗಪ್ರವೇಶ. ಮುಖ್ಯಅತಿಥಿಗಳು: ಸಾಹಿತಿ ಡಾ. ದೊಡ್ಡರಂಗೇಗೌಡ, ಶಾಸಕ ಡಾ. ಸಿ.

ಡಿ.5ರಿಂದ ಎರಡು ದಿನ ಬೆಂಗಳೂರು ಸಾಹಿತ್ಯ ಹಬ್ಬ

ಬೆಂಗಳೂರು

ವಿಜಯ ವಾಣಿ 19ನೇ ನವಂಬರ್ ೨೦15